ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಬಿ.ಪಿ.ಆರ್ ವಕೀಲರಿಂದಃ

ನನ್ನ ತಂದೆ ಚಲುವಯ್ಯ, ತಾಯಿ ನಿಂಗಮ್ಮ. ನನ್ನ ತಂದೆ ತಾಯಿ ತೀರಿಹೋಗಿ ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ಹೆತ್ತವರಿಗೆ ನಾನು ಸೇರಿ 6 ಹೆಣ್ಣು ಮಕ್ಕಳು, ಗಂಡು ಮಕ್ಕಳಿರಲಿಲ್ಲ. ನನ್ನ ಒಬ್ಬಳನ್ನು ಬಿಟ್ಟು ನನ್ನ ಸಹೋದರಿಯರೆಲ್ಲಾ ತೀರಿಹೋಗಿದ್ದಾರೆ. ನನ್ನ ತಂದೆ ಮಾಯಗಾನಹಳ್ಳಿಯವರು. ರಂಗಮ್ಮ ಉ.ಚಿಕ್ಕತಾಯಮ್ಮರವನ್ನು ಹೊರತುಪಡಿಸಿ ಉಳಿದ ಎಲ್ಲಾ ಹೆಣ್ಣು ಮಕ್ಕಳನ್ನು ಬೇರೆ ಬೇರೆ ಕೊಟ್ಟು ಮದುವೆ ಮಾಡಿದ್ದು ರಂಗಮ್ಮ ಮದುವೆಯ ನಂತರವೂ ತವರು ಮನೆಯಲ್ಲಿದ್ದರು ಎಂದರೆ ಸರಿ. ರಂಗಮ್ಮನ ಗಂಡ ಪುಟ್ಟಸ್ವಾಮಯ್ಯ ಎಂದರೆ ಸರಿ. ರಂಗಮ್ಮನವರನ್ನು ಪುಟ್ಟಸ್ವಾಮಯ್ಯನವರಿಗೆ ಮದುವೆ ಮಾಡಿದ ನಂತರ ಪುಟ್ಟಸ್ವಾಮಯ್ಯನವರನ್ನು ಮನೆವಾಳ್ತನಕ್ಕೆಂದು ನನ್ನ ತಂದೆ ತಾಯಿ ಅವರನ್ನು ಅವರ ಜೊತೆ ಇರಿಸಿಕೊಂಡಿದ್ದರು ಎಂದರೆ ಸರಿ. ನನ್ನ ಅಕ್ಕ ರಂಗಮ್ಮ ಉ.ಚಿಕ್ಕತಾಯಮ್ಮನವರ ಮದುವೆಯ ನಂತರ ಅವರು ಮಾಯಗಾನಹಳ್ಳಿಯ ತವರು ಮನೆಯಲ್ಲಿದ್ದರು ಎಂದರೆ ಸರಿ.

ದಾವಾ ಆಸ್ತಿಗಳು ನನ್ನ ತಾತನಿಂದ ಬಂದಂತಹ ಆಸ್ತಿಗಳಾಗಿರುತ್ತವೆ. ನನ್ನ ಅಕ್ಕ ತಂಗಿಯವರು ಅವರ ಜೀವಿತ ಕಾಲದಲ್ಲಿ ನನ್ನ ತಂದೆ ತಾಯಿಯ ಬಳಿ ದಾವಾ ಆಸ್ತಿಗಳಲ್ಲಿ ಭಾಗ ಕೇಳಿದ್ದರು. ಈ ರೀತಿ ಭಾಗ ಕೇಳಿದ ಬಗ್ಗೆ ಏನು ದಾಖಲೆ ಇದೆ ಎಂದರೆ ಮಾತೇ ದಾಖಲೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಂದೆ ತಾಯಿ ಅವರ ಜೀವಿತ ಕಾಲದಲ್ಲಿ ಎಲ್ಲಾ ಹೆಣ್ಣು ಮಕ್ಕಳಿಗೆ ಏನು ಬೇಕೋ ಅದನ್ನು ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ನನಗೆ ಈಗ 80 ವರ್ಷ ವಯಸ್ಸು ಎಂದರೆ ಸರಿ. ನನ್ನ 10ನೇ

ವಯಸ್ಸಿನಲ್ಲಿ ನನಗೆ ಮದುವೆಯಾಗಿತ್ತು.

ರಂಗಮ್ಮನವರಿಗೆ 1 ನೇ ಪ್ರತಿವಾದಿಯಲ್ಲದೇ ಇನ್ನೊಬ್ಬ ರಂಗಣ್ಣ ಎಂಬ ಮಗ ಇದ್ದು ಅವರು ಬಾವಿಗೆ ಬಿದ್ದು ಮೃತಪಟ್ಟಿದ್ದರು. ರಂಗಣ್ಣ ತೀರಿಹೋಗುವ ಮೊದಲೇ 1975 ರಲ್ಲಿ ನೋಂದಾಯಿತ ವಿಭಾಗಪತ್ರದ ಮೂಲಕ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿ ಮತ್ತು ರಂಗಣ್ಣನಿಗೆ ನನ್ನ ಹೆತ್ತವರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರಿನಲ್ಲಿ ಅಥವಾ ನನ್ನ ತಂದೆಯ ಹೆಸರಿನಲ್ಲಿ ದಾವಾ ಆಸ್ತಿಗಳ ಬಗ್ಗೆ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ದಾಖಲೆಗಳನ್ನು ಮಾತ್ರ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಯಾವ ರೀತಿ ದಾಖಲೆಗಳಾಗಿವೆ ಎಂದು ನನಗೆ ಗೊತ್ತಿದೆ, ಸಾಕ್ಷಿಯು ನನ್ನ ತಂದೆ ತಾಯಿ ಕೊಟ್ಟ ಬಗ್ಗೆ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆ ಸರಿಯಿಲ್ಲ ಎಂದು ಈ ದಾವೆ ಹಾಕುವ ಮೊದಲು ನಾನು ಎಲ್ಲೂ ಪ್ರಶ್ನಿಸಿಲ್ಲ.

ನನ್ನ ತಾತ ರಂಗಯ್ಯನವರ ಮಕ್ಕಳು ಯಾರೆಂದರೆ ಚಲುವಯ್ಯ, ರಂಗಯ್ಯ, ಚಿಕ್ಕಹನುಮಯ್ಯ. ರಂಗಯ್ಯನ ಮಕ್ಕಳು ಮತ್ತು ಚಿಕ್ಕಹನುಮಯ್ಯನ ಮಕ್ಕಳು 50-60 ವರ್ಷಗಳಿಂದ ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. ನನ್ನ ತಾತ ಹಾಗೂ ಅವರ ಮಕ್ಕಳು ಯಾವಾಗ ತೀರಿಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಲುವಯ್ಯ, ರಂಗಯ್ಯ, ಚಿಕ್ಕಹನುಮಯ್ಯ ವಿಭಾಗ ಮಾಡಿಕೊಂಡ ನಂತರ ತೀರಿಹೋಗಿದ್ದರು ಎಂದರೆ ಸರಿ. ನನ್ನ ತಾತ ರಂಗಯ್ಯ ಪತ್ರ ವ್ಯವಹಾರ

ಏನಾದರೂ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆಯಾಗಲೀ ಅಥವಾ ನನ್ನ ತಾತನಾಗಲೀ ದಾವಾ ಸ್ವತ್ತುಗಳ ಬಗ್ಗೆ ಏನಾದರೂ ಪತ್ರ ವ್ಯವಹಾರ ಮಾಡಿದ್ದರಾ ಎಂದು ಈ ದಾವೆ ಹಾಕುವ ಮೊದಲು ನಾನು ಪರಿಶೀಲಿಸಿದ್ದೆನಾ ಎಂದರೆ ಯಾವುದೇ ಪತ್ರ ಮಾಡಿರಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಸಹೋದರಿಯರಾದ ಗೌರಮ್ಮ ಮತ್ತು ಕೆಂಪಮ್ಮ ನನಗೆ ತಿಳುವಳಿಕೆ ಬರುವ ಮೊದಲೇ ತೀರಿಹೋಗಿದ್ದರು, ತಿಮ್ಮಮ್ಮ ತೀರಿಹೋಗಿ 10-16 ವರ್ಷಗಳಾಗಿವೆ. ಚಿಕ್ಕತಾಯಮ್ಮ ಉ.ರಂಗಮ್ಮ ತೀರಿಹೋಗಿ 3 ವರ್ಷಗಳಾಗಿವೆ. ಪಾರ್ವತಮ್ಮ ತೀರಿಹೋಗಿ 2 ವರ್ಷಗಳಾಗಿವೆ.

ನನ್ನ ತಾತ ರಂಗಣ್ಣನ ಇತರ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ತಾತ ರಂಗಣ್ಣನ ಬೇರೆ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಾತ ರಂಗಣ್ಣನ ಮೂವರು ಮಕ್ಕಳು ವಿಭಾಗ ಮಾಡಿಕೊಂಡ ಪ್ರಕಾರ ಯಾವ ಯಾವ ಆಸ್ತಿ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಆ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಯಾರು ಯಾರು ಯಾವ ಯಾವ ಆಸ್ತಿಗಳ ಅನುಭವದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಎಷ್ಟು ವರ್ಷಗಳಿಂದ ದಾಖಲೆ ಬರುತ್ತಿದೆ ಎಂದು ನಾನು ನೋಡಿಲ್ಲ. 1975 ರಲ್ಲಿ ವಿಭಾಗ ಮಾಡಿಕೊಂಡ ನಂತರ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ರಂಗಣ್ಣನ ಹೆಸರಿನಲ್ಲಿ ದಾವಾ ಆಸ್ತಿಗಳ ದಾಖಲೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ರಂಗಣ್ಣನ ಮರಣಾ ನಂತರ 1 ನೇ ಪ್ರತಿವಾದಿ ರಂಗಣ್ಣನ ಹೆಸರಿನಲ್ಲಿದ್ದ ಆಸ್ತಿಗಳ ಖಾತೆ ತನ್ನ ಹೆಸರಿಗೆ ಮಾಡಿಕೊಂಡರು ಎಂದರೆ ಮಾಡಿಕೊಂಡರು ಎಂದು ಸಾಕ್ಷಿಯು

ನುಡಿಯುತ್ತಾರೆ. ದಾವಾ ಆಸ್ತಿಗಳು 3 ಎಕರೆ ವಿಸ್ತೀರ್ಣ ಇದ್ದು ಅವುಗಳಲ್ಲಿ ಮಾವಿನ ಮರಗಳಿವೆ, ಎಷ್ಟು ಇವೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಾನು ಮಾಡುತ್ತಿದ್ದೆ ಬಿಟ್ಟುಬಿಟ್ಟಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಚಿಕ್ಕತಾಯಮ್ಮ ಉ ರಂಗಮ್ಮ 45 ವರ್ಷಗಳಿಂದ ಮನೆ ಕಟ್ಟಿ, ಅವರು ಹಾಗೂ 1ನೇ ಪ್ರತಿವಾದಿ ಅಲ್ಲೇ ವಾಸವಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯ ಹೆಸರಿಗೆ ಯಾವ ರೀತಿ ಪಹಣಿ ಖಾತೆಯಾಗಿದೆ ಎಂಬ ಬಗ್ಗೆ ನಾನು ದಾಖಲೆ ಕೊಟ್ಟಿದ್ದೇನಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿಯ 2ನೆ ಸ್ವತ್ತಿನ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ಯಾವ ರೀತಿ ಆಗಿದೆ ಎಂದು ನಾನು ನೋಡಿಲ್ಲ. 1ನೇ ಪ್ರತಿವಾದಿ ಸಲ್ಲಿಸಿದ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿಲ್ಲ. 1ನೇ ಪ್ರತಿವಾದಿ ತಕರಾರಿನ ಜೊತೆ 1975 ರಲ್ಲೇ ಆಸ್ತಿ ವಿಭಾಗವಾಗಿದೆ ಎಂದು ದಾಖಲೆ ಸಲ್ಲಿಸಿದ್ದು ಅದನ್ನು ನಾನು ನೋಡಿದ್ದೇನಾ ಎಂದರೆ ನೋಡಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ನನ್ನ ಗಂಡ ಚನ್ನಿಗಯ್ಯ. ನನ್ನ ಗಂಡ ಗ್ರಾಮಪಂಚಾಯತ್ ಸದಸ್ಯರಾಗಿದ್ದರು ಎಂದರೆ ಸರಿ. 1975 ರಲ್ಲಿ ವಿಭಾಗವಾದಾಗ ನನ್ನ ಗಂಡನೇ ಪತ್ರ ಬರೆಸಿ ಅದಕ್ಕೆ ಸಹಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಸ್ತಿಗಳನ್ನು ನೋಂದಣಿ ಮಾಡಿಸಲು ನಾನೇ ನನ್ನ ಗಂಡನನ್ನು ಕಳುಹಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಹನುಮಯ್ಯ ಹಾಗೂ ರಂಗಣ್ಣ ಆಸ್ತಿ ವಿಭಾಗ ಮಾಡಿಕೊಂಡ ವಿಚಾರ ನನ್ನ ಗಂಡನಿಗೆ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

ನಾನು ಇರುವ ಊರಿನಲ್ಲಿ ನಮಗೆ ಸ್ವಲ್ಪ ಆಸ್ತಿ ಇದೆ. ನನ್ನ ಮದುವೆಯಾದಾಗಿನಿಂದ ಇಲ್ಲಿಯವರೆಗೂ ಯಾವುದೇ ಆಸ್ತಿಗಳಲ್ಲಿ ಭಾಗ

ಬೇಕೆಂದು ಲಿಖಿತ ದಾಖಲೆ ಕೊಟ್ಟಿಲ್ಲ. ನಾನು ಗಂಗವಾಡಿಯಲ್ಲಿ ನನ್ನ ಗಂಡನ ಮನೆಯಲ್ಲಿ ಅನುಕೂಲವಾಗಿ ಬದುಕುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಸಂಪಾದಿಸಿದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ.

ಇತ್ತೀಚೆಗೆ ದಾವಾ ಆಸ್ತಿಗಳಿರುವ ಮಾಯಗಾನಹಳ್ಳಿ ಮತ್ತು ಸುತ್ತಮುತ್ತ ಆಸ್ತಿಗಳ ಬೆಲೆ ಜಾಸ್ತಿಯಾಗಿದೆ ಎಂದರೆ ಸರಿ. ಕಾರಣ 1 ನೇ ಪ್ರತಿವಾದಿಗೆ ತೊಂದರೆ ಕೊಟ್ಟರೇ ಹಣ ಕೊಡುತ್ತಾರೆಂಬ ಕಾರಣಕ್ಕೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1975 ರಿಂದ ನಮ್ಮ ಕುಟುಂಬದಲ್ಲಿಲ್ಲ ಕಾರಣ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲೆಗಳಿವೆ ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಆಸ್ತಿಗಳ ಮಾಲಿಕರಾಗಿದ್ದು ಅವರಿಗೆ ತೊಂದರೆ ಕೊಟ್ಟರೆ ಅವರು ಏನಾದರೂ ಪರಿಹಾರ ಕೊಡುತ್ತಾರೆಂದು ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಹೌದು ಎಂದು ಸಾಕ್ಷಿಯು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.